ಓ ಎಸ್ ನಂಃ 116-16
ಪಿ ಡಬ್ಲ್ಯೂ ಃ 2

**ದಿಃ 24-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಎಂ ಸಿ ಜೆ ವಕೀಲರಿಂದ**

5. ನಾನು ದೋಣೇನಹಳ್ಳಿಯಲ್ಲಿ ವಾಸವಿರುತ್ತೇನೆ. ನಾನು ದೋಣೇನಹಳ್ಳಿಯಲ್ಲಿ ವಾಸವಿರುತ್ತೇನೆ ಎಂದು ತೋರಿಸಲು ಮತ್ತು ನಾನು ಬಸವರಾಜು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ನನ್ನನ್ನು ಈ ದಿನ ನ್ಯಾಯಾಲಯಕ್ಕೆ ಬೆಟ್ಟಯ್ಯರವರು ಕರೆದುಕೊಂಡು ಬಂದಿರುತ್ತಾರೆ. ಬೆಟ್ಟಯ್ಯರವರು ಈಗ ತೀರಿಕೊಂಡಿರುತ್ತಾರೆ. ನನ್ನನ್ನು ಈ ದಿನ ಮೂರ್ತಿ ಹಾಗೂ ನಾರಾಯಣರವರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾರೆ. ಸದರಿ ಮೂರ್ತಿ ಹಾಗೂ ನಾರಾಯಣರವರು ಬೆಟ್ಟಯ್ಯನ ಮಕ್ಕಳು ಆಗಿರುತ್ತಾರೆ. ಈ ದಾವೆಯನ್ನು ಬೆಟ್ಟಯ್ಯನ ಮಕ್ಕಳಾದ ಮೂರ್ತಿ ಹಾಗೂ ನಾರಾಯಣರವರು ಹೂಡಿರುತ್ತಾರೆ. ಸದರಿಯವರು ಜಮೀನು ತಮ್ಮದೆಂದು ಹೇಳಿ ಈ ದಾವೆ ಹೂಡಿರುತ್ತಾರೆ. ಈ ದಾವೆಯನ್ನು ವಿಭಾಗಕ್ಕಾಗಿ ಹೂಡಿರುವುದಿಲ್ಲ. ಈ ದಾವೆಯನ್ನು ಕೆಂಪಣ್ಣ ಹಾಗೂ ಗಾಳಪ್ಪರವರ ವಿರುದ್ದ ಹೂಡಲಾಗಿದೆ. ಕೆಂಪಣ್ಣರವರು ಈಗ ತೀರಿಕೊಂಡಿರುತ್ತಾರೆ. ಈ ದಾವೆಯನ್ನು ಯಾರ ವಿರುದ್ದ ಹೂಡಲಾಗಿದೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

6. ಈ ನ್ಯಾಯಾಲಯದಿಂದ ನನಗೆ ಸಾಕ್ಷಿ ಹೇಳುವಂತೆ ನೋಟಿಸ್ ಬಂದಿರುವುದಿಲ್ಲ. ನಾನು ದಾವಾ ಆಸ್ತಿಯ ಪಕ್ಕದಲ್ಲಿರುವುದರಿಂದ ನನಗೆ ದಾವೆಯ ಬಗ್ಗೆ ಮಾಹಿತಿ ಇದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸಹಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಸರ್ವೆ ನಂ 36 ರ ಮೇಲೆ ಹೂಡಲಾಗಿದೆ. ಸರ್ವೆ ನಂ 36 1 ಎಕರೆ 17 ಗುಂಟೆ ಇರುತ್ತದೆ. ಈ ದಾವೆಯನ್ನು ಪೂರ್ತಿ 1 ಎಕರೆ 17 ಗುಂಟೆಯ ಮೇಲೆ ಹೂಡಿರುತ್ತಾರೆ. ನಾನು ವಾದಿ ಹಾಗೂ ಪ್ರತಿವಾದಿಗಳನ್ನು ನಾನು ಹುಟ್ಟಿದಾಗಿನಿಂದ ನೋಡುತ್ತಿದ್ದೇನೆ. ಈ ದಾವೆಯನ್ನು ಮೂರ್ತಿ ಹಾಗೂ ನಾರಾಯಣರವರು ಸಲ್ಲಿಸಿರುವುದಿಲ್ಲ ಎಂದರೆ ಅವರೇ ಸಲ್ಲಿಸಿರುತ್ತಾರೆ ಎಂದು ಹೇಳುತ್ತಾರೆ. ನಾರಾಯಣ ಹಾಗೂ ಮೂರ್ತಿರವರ ತಂದೆಯ ಹೆಸರು ಬೆಟ್ಟಯ್ಯ ಆಗಿರುತ್ತದೆ. ಬೆಟ್ಟಯ್ಯರವರ ತಂದೆಯ ಹೆಸರು ಚಲುವಯ್ಯ ಆಗಿರುತ್ತದೆ. ಚಲುವಯ್ಯರವರಿಗೆ ಇಬ್ಬರು ಮಕ್ಕಳು ಎಂದರೆ ನಿಜ, ಅವರ ಹೆಸರು ಚೆನ್ನಪಿಳ್ಳಯ್ಯ ಮತ್ತು ಬೆಟ್ಟಯ್ಯ ಆಗಿರುತ್ತದೆ. ಚನ್ನಪಿಳ್ಳಯ್ಯರವರಿಗೆ 4 ಜನ ಮಕ್ಕಳು ಎಂದರೆ ನಿಜದ ಅವರು ಮುನಿಕೃಷ್ಣಪ್ಪ, ರಾಜಣ್ಣ,

ನರಸಿಂಹಮೂರ್ತಿ ಮತ್ತು ಗೋವಿಂದರಾಜು ಎಂದರೆ ನಿಜ. ಚಲುವಯ್ಯರವರಿಗೆ 3 ಜನ ಸಹೋದರರು ಅವರು ಮೋಟಯ್ಯ, ಅಯ್ಯಣ್ಣಪ್ಪ ಮತ್ತು ನರಸಿಂಹಯ್ಯ. ಮೇಲ್ಕಂಡವರು ಚನ್ನಯ್ಯರವರ ವಾರಸುದಾರರು ಎಂದರೆ ನಿಜ. ಮೇಲ್ಕಂಡ ಎಲ್ಲಾ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಗೊತ್ತಿಲ್ಲ. ಈ ಮೊದಲು ಚಲುವಯ್ಯರವರಿಗೆ ಯಾವ ಜಮೀನುಗಳಲ್ಲಿ ಭಾಗ ಬಂದಿರುತ್ತದೆ ಗೊತ್ತಿಲ್ಲ. ಅದೇ ರೀತಿ ಚನ್ನಪಿಳ್ಳಯ್ಯ ಮತ್ತು ಬೆಟ್ಟಯ್ಯರವರಿಗೆ ಯಾವ ಜಮೀನುಗಳಲ್ಲಿ ಭಾಗ ಬಂದಿರುತ್ತದೆ ನನಗೆ ಗೊತ್ತಿದ್ದು ಅವುಗಳ ಸರ್ವೆ ನಂಬರ್ ಗೊತ್ತಿಲ್ಲ. ಚಲುವಯ್ಯರವರಿಗೆ ಸರ್ವೆ ನಂ 36 ರಲ್ಲಿ 1 ಎಕರೆ 17 ಗುಂಟೆ ಭಾಗದಲ್ಲಿ ಬಂದಿತ್ತು, ಸರ್ವೆ ನಂ 41 ರಲ್ಲಿ 2 ಎಕರೆ, ಸರ್ವೆ ನಂ 51 ರಲ್ಲಿ 2 ಎಕರೆ 26 ಗುಂಟೆ ವಿಭಾಗದಲ್ಲಿ ಬಂದಿತ್ತು ಎಂದರೆ ನಿಜ. ಸರ್ವೆ ನಂ 36 ರಲ್ಲಿ ಚಲುವಯ್ಯರವರು 1 ಎಕರೆ ಜಮೀನನ್ನು ದಿನಾಂಕಃ 24-04-1972 ರಲ್ಲಿ ಮುತ್ತಯ್ಯರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಭೋಗ್ಯ ಮಾಡಿರುತ್ತಾರೆ ಎಂದು ಹೇಳುತ್ತಾರೆ. ದಿನಾಂಕಃ 24-04-1972 ರಲ್ಲಿ ಚಲುವಯ್ಯರವರು ಮುತ್ತಯ್ಯರವರಿಗೆ ಮಾಡಿಕೊಟ್ಟಿರುತ್ತಾರೆಂದು ಹೇಳುವ ಕ್ರಯಪತ್ರದ ಬಗ್ಗೆ ನನಗೆ ಗೊತ್ತಿಲ್ಲ. ಆ ಕ್ರಯಪತ್ರದ ಬಗ್ಗೆ ನಾನು ಎಲ್ಲಿಯೂ ತಿಳಿದುಕೊಂಡಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಅಡಮಾನದ ಬಗ್ಗೆ ಹೇಳಿರುತ್ತೇನೆ ಎಂದರೆ ಚಲುವಯ್ಯರವರು ಜಮೀನನ್ನು ಕೆಂಪಯ್ಯ ಮತ್ತು ಗಾಳಪ್ಪರವರಿಗೆ ಭೋಗ್ಯಕ್ಕೆ ಕೊಟ್ಟಿದ್ದು ನಂತರದ ದಿನಗಳಲ್ಲಿ ಅವರಿಗೆ ಹಣ ಕೊಟ್ಟು ಜಮೀನನ್ನು ಬಿಡಿಸಿಕೊಂಡಿರುತ್ತಾರೆಂದು ಊರಿನ ಜನರ ಮುಖಾಂತರ ತಿಳಿದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ಈ ವಿಷಯವನ್ನು ನನ್ನಮುಖ್ಯ ವಿಚಾರಣೆ ಪ್ರಮಾಣ ಪತದಲ್ಲಿ ಹೇಳಿಲ್ಲ ಎಂದರೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ ಭೋಗ್ಯಪತ್ರವನ್ನು ನೋಡಿಲ್ಲ. ಊರಿನ ಜನರ ಮಾತುಕೇಳಿಕೊಂಡು ನಾನು ನ್ಯಾಯಾಲಯದಲ್ಲಿ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನಾ ಎಂದರೆ ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ ಎಂದು ಹೇಳುತ್ತಾರೆ.

**1, 5 ರಿಂದ 8 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಯ ಪಾಟೀ ಸವಾಲನ್ನು ಅಳವಡಿಸಿಕೊಳ್ಳಬೇಕೆಂದು ಕೇಳಿಕೊಂಡಿದ್ದರಿಂದ ಅಳವಡಿಸಿಕೊಳ್ಳಲಾಯಿತು.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**

**ಓ ಎಸ್ ನಂಃ 116-16**
**ಪಿ ಡಬ್ಲ್ಯೂ ಃ 3**

**ದಿಃ 24-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಎಂ ಸಿ ಜೆ ವಕೀಲರಿಂದ**

4. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ. ನಾನು ದೋಣೇನಹಳ್ಳಿಯಲ್ಲಿ ವಾಸವಿರುತ್ತೇನೆ. ನಾನು ದೋಣೇನಹಳ್ಳಿಯಲ್ಲಿ ವಾಸಮಾಡುತ್ತಿದ್ದೇನೆ ಮತ್ತು ನಾನು ಮಂಜುನಾಥ್ ಎಂದು ತೋರಿಸಲು ಆಧಾರ್ ಕಾರ್ಡನ್ನು ಹಾಜರುಪಡಿಸಿರುತ್ತೇನೆ. ಸಾಕ್ಷಿಗೆ ಈಗ ವಾದಿಗಳು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಲಾಗಿ ಅದಕ್ಕೆ ಸಾಕ್ಷಿ ತಾವು ಆಧಾರ್ ಕಾರ್ಡನ್ನು ಕಳುಹಿಸಿದ್ದು ಅದನ್ನು ಹಾಜರುಪಡಿಸಲಾಗಿದೆಯೋ ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ. ಈ ದಿನ ಸಾಕ್ಷಿ ಹೇಳಲು ನನಗೆ ನ್ಯಾಯಾಲಯದಿಂದ ನೋಟಿಸ್ ಬಂದಿರುವುದಿಲ್ಲ. ನನ್ನನ್ನು ಈ ದಿನ ಸಾಕ್ಷಿ ಹೇಳಲು ವಾದಿ ಕರೆದುಕೊಂಡು ಬಂದಿರುತ್ತಾರೆ. ನನಗೆ ಬುದ್ದಿಬಂದಾಗಿನಿಂದ ವಾದಿಯ ಪರಿಚಯವಿರುತ್ತದೆ. ವಾದಿ ನನಗೆ ಸಂಬಂದಿಕರಲ್ಲ. ವಾದಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದು ಒಬ್ಬ ಹೆಣ್ಣು ಮಗಳು ತೀರಿಕೊಂಡಿರುತ್ತಾರೆ. ನಾರಾಯಣ, ಕೃಷ್ಣಮೂರ್ತಿ ಮತ್ತು ಲಕ್ಕಮ್ಮರವರು ವಾದಿಯ ಮಕ್ಕಳಾಗಿರುತ್ತಾರೆ. ನಾರಾಯಣ, ಕೃಷ್ಣಮೂರ್ತಿ ಹಾಗೂ ಲಕ್ಕಮ್ಮರವರು ಬೆಟ್ಟಯ್ಯರವರ ವಾರಸುದಾರರು ಎಂದರೆ ನಿಜ. ಬೆಟ್ಟಯ್ಯರವರ ಅಣ್ಣನ ಹೆಸರು ಚನ್ನಪಿಳ್ಳಯ್ಯ ಆಗಿರುತ್ತದೆ. ಚನ್ನಪಿಳ್ಳಯ್ಯರವರಿಗೆ 4 ಜನ ಮಕ್ಕಳು ಅವರು ಮುನಿಕೃಷ್ಣಪ್ಪ, ರಾಜಣ್ಣ, ನರಸಿಂಹಮೂರ್ತಿ, ಗೋವಿಂದರಾಜು ಎಂದರೆ ನಿಜ, ಸಾಕ್ಷಿ ಮುಂದುವರೆದು ಲತಾ ಎನ್ನುವ ಹೆಣ್ಣು ಮಗಳು ಸಹ ಇರುತ್ತಾರೆಂದು ಹೇಳುತ್ತಾರೆ. ಚನ್ನಪಿಳ್ಳಯ್ಯ ಹಾಗೂ ಬೆಟ್ಟಯ್ಯರವರ ತಂದೆಯ ಹೆಸರು ಚಲುವಯ್ಯ ಎಂದರೆ ಆ ರೀತಿಯಾಗಿ ಹೇಳುತ್ತಾರೆ ಎಂದು ಹೇಳುತ್ತಾರೆ. ಚಲುವಯ್ಯರವರಿಗೆ 3 ಜನ ಸಹೋದರರು ಅವರು ಮೋಟಯ್ಯ, ಅಯ್ಯಣ್ಣಪ್ಪ ಮತ್ತು ನರಸಿಂಹಯ್ಯ ಎಂದರೆ ಇರಬಹುದು. ಇವರ ಮೂಲ ವಾರಸುದಾರರು ಚನ್ನಯ್ಯ ಎಂದರೆ ಗೊತ್ತಿಲ್ಲ.

5. ಈ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ವಾದಿ ಈ ದಾವೆಯನ್ನು 1 ಮತ್ತು 4 ನೇ ಪ್ರತಿವಾದಿಗಳ ವಿರುದ್ದ ಹೂಡಿರುತ್ತಾರೆ. ವಾದಿ ಈ ದಾವೆಯನ್ನು 1 ಮತ್ತು 4 ನೇ ಪ್ರತಿವಾದಿಗಳನ್ನು ಹೊರತುಪಡಿಸಿ ಬೇರೆಯವರ ವಿರುದ್ದ ಹೂಡಿಲ್ಲ. ಮೇಲೆ ಹೇಳಿದ ಎಲ್ಲಾ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಗೊತ್ತಿಲ್ಲ. ವಿಭಾಗದಲ್ಲಿ ಚಲುವಯ್ಯರವರಿಗೆ ಎಷ್ಟು ಜಮೀನು ಬಂದಿತ್ತು ನನಗೆ ಗೊತ್ತಿಲ್ಲ ಆದರೆ ಸರ್ವೆ ನಂ 36 ರಲ್ಲಿ ಸ್ವಾಧೀನತೆ ಹೊಂದಿರುವುದು ಗೊತ್ತಿದೆ ಎಂದು ಹೇಳುತ್ತಾರೆ. ಸರ್ವೆ ನಂ 36 ರ ಒಟ್ಟು ವಿಸ್ತೀರ್ಣ 5 ಎಕರೆ 28 ಗುಂಟೆ ಎಂದರೆ

ಇರಬಹುದು. ಸದರಿ ವಿಸ್ತೀರ್ಣದ ಜಮೀನಿನಲ್ಲಿ ಚಲುವಯ್ಯರವರಿಗೆ 1 ಎಕರೆ 17 ಗುಂಟೆ ಜಮೀನು ಭಾಗದಲ್ಲಿ ಬಂದಿರುತ್ತದೆ ಎಂದರೆ ಇರಬಹುದು. ಅದೇ ರೀತಿ ಸರ್ವೆ ನಂ 41 ರಲ್ಲಿ ಚಲುವಯ್ಯರವರಿಗೆ 2 ಎಕರೆ ಎಂದರೆ ಇರಬಹುದು, ಸರ್ವೆ ನಂ 51 ರಲ್ಲಿ ಚಲುವಯ್ಯರವರಿಗೆ 2 ಎಕರೆ 26 ಗುಂಟೆ ಜಮೀನು ಭಾಗದಲ್ಲಿ ಬಂದಿರುತ್ತದೆ ಎಂದರೆ ನಿಜ. ದಿನಾಂಕಃ 24-04-1972 ರಲ್ಲಿ ಚಲುವಯ್ಯರವರು ಸರ್ವೆ ನಂ 36 ರಲ್ಲಿ 1 ಎಕರೆ ಜಮೀನನ್ನು ಮುತ್ತಯ್ಯರವರಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಉಳಿಕೆ 17 ಜಮೀನಿನಲ್ಲಿ ಚನ್ನಪಿಳ್ಳಯ್ಯ ಹಾಗೂ ಬೆಟ್ಟಯ್ಯರವರ ಮಕ್ಕಳು ದಿನಾಂಕಃ 14-12-2007 ರಂದು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಅದೇ ರೀತಿ ವಾದಿ ಹಾಗೂ 2 ನೇ ಪ್ರತಿವಾದಿ 17 ಗುಂಟೆ ಪೈಕಿ ತಲಾ 8 1/2 ಗುಂಟೆ ಭೂ ಸ್ವಾಧೀನತೆಯಾಗಿರುತ್ತದೆ ಎಂದರೆ ನಿಜ. ಅದೇ ರೀತಿ ವಾದಿ ಹಾಗೂ 2 ನೇ ಪ್ರತಿವಾದಿಗೆ ಅವಾರ್ಡಾಗಿ ಪರಿಹಾರದ ಮೊತ್ತ ಬಂದಿರುತ್ತದೆ ಎಂದರೆ ನಿಜ. ಅದೇ ರೀತಿ ಉಳಿಕೆ 1 ಎಕರೆ ಜಮೀನು ಭೂ ಸ್ವಾಧೀನತೆಯಾಗಿ 1 ಮತ್ತು 4 ನೇ ಪ್ರತಿವಾದಿಗೆ ಪರಿಹಾರದ ಮೊತ್ತವನ್ನು ನ್ಯಾಯಾಲಯದಲ್ಲಿ ಠೇವಣಿ ಇಡಲಾಗಿದೆ ಎಂದರೆ ಗೊತ್ತಿಲ್ಲ. 1 ಎಕರೆ ಜಮೀನು ಮತ್ತು 17 ಗುಂಟೆ ಜಮೀನನ್ನು ಈ ಮೊದಲೇ ಕೆ ಹೆಚ್ ಬಿ ರವರು 2011-12 ರಲ್ಲಿ ಭೂ ಸ್ವಾಧೀನತೆ ಮಾಡಿ ಕಲಂ 4 (1) ಮತ್ತು ಕಲಂ 6 (1)ರ ನೋಟಿಫಿಕೇಷನ್ ಮಾಡಿ ಸ್ವಾಧೀನತೆಯನ್ನು ಪಡೆದುಕೊಂಡಿರುತ್ತಾರೆ ಎಂದರೆ ನಿಜ, ಸಾಕ್ಷಿ ಮುಂದುವರೆದು 2016 ನೇ ಇಸವಿಯಲ್ಲಿ ಕಲಂ 6 (1)ರ ನೋಟಿಫಿಕೇಷನ್ ಆಗಿರುತ್ತದೆ ಎಂದು ಹೇಳುತ್ತಾರೆ. 2011 ರಲ್ಲಿ ಕೆ ಹೆಚ್ ಬಿ ರವರು ದಾವಾ ಆಸ್ತಿಯ ಸ್ವಾಧೀನತೆಯನ್ನು ಪಡೆದುಕೊಂಡಿದ್ದರಿಂದ ವಾದಿ ದಾವಾ ಆಸ್ತಿಯ ಸ್ವಾಧೀನತೆ ಹೊಂದಿಲ್ಲ ಎಂದರೆ 2018 ರವರೆಗೂ ವಾದಿ ಸ್ವಾಧೀನತೆ ಹೊಂದಿದ್ದರು ಎಂದು ಹೇಳುತ್ತಾರೆ. 2018 ರವರೆಗೂ ವಾದಿ ದಾವಾ ಆಸ್ತಿಯ ಸ್ವಾಧೀನತೆ ಹೊಂದಿದ್ದರೂ ಎಂಬುದಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ನಿಜ.

6. ದಿನಾಂಕಃ 24-04-1972 ರಲ್ಲಿ ಮುತ್ತಯ್ಯರವರು 1 ಎಕರೆ ಜಮೀನನ್ನು ಖರೀದಿ ಮಾಡಿದ ನಂತರ ಅವರು ಹಾಗೂ ಅವರ ವಾರಸುದಾರರು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ದಾಖಲೆ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಚಲುವಯ್ಯ, ಅವರು ತೀರಿಕೊಂಡ ನಂತರ ಬೆಟ್ಟಯ್ಯ ಮತ್ತು ನಂತರ ಬೆಟ್ಟಯ್ಯನ ಮಕ್ಕಳು ದಿನಾಂಕಃ 24-04-1972 ರ ಕ್ರಯಪತ್ರವನ್ನು ಪ್ರಶ್ನೆ ಮಾಡಿರುತ್ತಾರೋ ಇಲ್ಲವೋ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಮತ್ತು ಈ ಹಿಂದೆ ನಡೆದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ನಿಜ.

7. ನನ್ನ ತಂದೆಯ ಹೆಸರು ಕ್ಯಾತಪ್ಪ ಆಗಿರುತ್ತದೆ. ನನ್ನ ಜಮೀನಿನ ಸರ್ವೆ ನಂ 35/4 ಇರುತ್ತದೆ. ಸಾಕ್ಷಿಗೆ ಈಗ ನಿಪಿ 26 ನ್ನು ತೋರಿಸಲಾಗಿ ಅದರಲ್ಲಿ ನನ್ನ ತಂದೆಯ ಹೆಸರು ಕ್ಯಾತಪ್ಪ ಎಂದುಇರುವುದಿಲ್ಲ ಎಂದರೆ ನಿಜ, ಸಾಕ್ಷಿ ಮುಂದುವರೆದು ಅದು ಕ್ಯಾತೇಗೌಡ ಉರುಫ್ ಕ್ಯಾತಪ್ಪ ಎಂದು ಇರುತ್ತದೆ ಎಂದು

ಹೇಳುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ನಿಪಿ 26 ರಲ್ಲಿ ನನ್ನ ತಂದೆಯ ಹೆಸರು ಕ್ಯಾತೇಗೌಡ ಉರುಫ್ ಕ್ಯಾತಪ್ಪ ಎಂದು ಇರುವುದಿಲ್ಲ ಎಂದರೆ ನಿಜ. ನಿಪಿ 26 ಈ ದಾವೆಗೆ ಸಂಬಂದಿಸದೇ ಇದ್ದರೂ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1972 ರಿಂದ ಇಲ್ಲಿಯವರೆಗೆ ಮುತ್ತಯ್ಯ ಹಾಗೂ ಅವರ ವಾರಸುದಾರರು ದಾವಾ ಆಸ್ತಿಯ ಖಾತೆ ಮಾಡಿಸಿಕೊಂಡು ಅವರೇ ಸ್ವಾಧೀನತೆ ಹೊಂದಿರುತ್ತಾರೆ ಮತ್ತು ಪರಿಹಾರದ ಹಣವನ್ನು ಪಡೆದಿರುತ್ತಾರೆ ದಾಖಲೆಗಳ ಬಗ್ಗೆ ಗೊತ್ತಿಲ್ಲ ವಾದಿ ದಾವಾ ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎಂದು ಹೇಳುತ್ತಾರೆ.

**1, 5 ರಿಂದ 8 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಯ ಪಾಟೀ ಸವಾಲನ್ನು ಅಳವಡಿಸಿಕೊಳ್ಳಬೇಕೆಂದು ಕೇಳಿಕೊಂಡಿದ್ದರಿಂದ ಅಳವಡಿಸಿಕೊಳ್ಳಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**